ಮೂಲ ದಾವಾ ನಂಃ 105/2022
ಪಿ ಡಬ್ಲುಃ 01.

ಸಾಕ್ಷಿಯನ್ನು ದಿನಾಂಕಃ **31.10.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಎಂ.ಜೆ. ವಕೀಲರಿಂದಃ**

ಈ ದಾವೆಯನ್ನು ಹೂಡಲು ನನ್ನ ತಾಯಿಯವರು ಮಾಹಿತಿಯನ್ನು ನೀಡಿದ್ದಾರೆ. ನನ್ನ ತಾಯಿಯು ಇದೊಂದೇ ದಾವೆಯನ್ನು ಹೂಡಿದ್ದಾರೆ. ನನ್ನ ತಾಯಿ ಈ ಹಿಂದೆ ದಾಖಲಿಸಿದ ಒಂದು ದಾವೆಯು ವಜಾ ಆಗಿದೆ ಎಂದರೆ ಸರಿಯಲ್ಲ. ದಾವಾ ಸ್ಥಳದ ಸರ್ವೆ ನಂಬರ್ 109 ಆಗಿದೆ. ದಾವಾ ಸ್ಥಳದ ಕುರಿತಾಗಿ ಸರ್ವೆ ಇಲಾಖೆಯವರು ಸರ್ವೆಯನ್ನು ಮಾಡಿದಾಗ ಹಕ್ಕು ಪತ್ರವನ್ನು ನೀಡಿದ್ದಾರೆಂದು ಸಾಕ್ಷಿ ನುಡಿದಿದ್ದಾರೆ. ದಾವಾ ಸ್ಥಳಕ್ಕೆ ಸಂಬಂಧಪಟ್ಟಂತೆ ಒಂದು ಸರ್ವೆ ನಕಾಶೆ ಇದೆ ಎಂದರೆ ಸರಿ, ಆದರೆ ಸದ್ರಿ ಸರ್ವೆ ನಕಾಶೆಯನ್ನು ಯಾರಿಗೂ ಕೊಟ್ಟಿಲ್ಲ ಎಂಬುದಾಗಿ ನುಡಿದಿದ್ದಾರೆ. ಈ ದಾವೆಯಲ್ಲಿ ದಾವಾ ಸ್ಥಳಕ್ಕೆ ಸಂಬಂಧಪಟ್ಟಂತೆ ನಾವು ದಾಖಲೆಯನ್ನು ಹಾಜರುಪಡಿಸಿದ್ದೇವೆ.

ನಮ್ಮ ತಾಯಿಯು ಬರೆದಂತಹ ವಿಲ್ ನಾಮೆಯನ್ನು ಅವಶ್ಯಕತೆ ಬಿದ್ದರೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೇನೆ. ಈ ದಾವೆಯಲ್ಲಿ ರೂ.600/- ಕ್ಕೆ ಸಂಬಂಧಪಟ್ಟಂತೆ ಹಾಜರುಪಡಿಸಿದ ಒಂದು ಅಗ್ರಿಮೆಂಟ್ ಪ್ರತಿಯು ಖೊಟ್ಟಿ ದಾಖಲೆಯಾಗಿರುತ್ತದೆ. ಸದ್ರಿ ಖೊಟ್ಟಿ ದಾಖಲೆಯು ಯಾವ ದಿನಾಂಕದಂದು ಆಗಿದೆ ಎಂದಾಗ ಸಾಕ್ಷಿಯು ಯಾವ ದಾಖಲೆ ಎಂದು ನುಡಿದಿದ್ದಾರೆ. ಸಾಕ್ಷಿಯು ಮುಂದುವರಿದು 1986 ನೇ ಇಸ್ವಿಯಲ್ಲಿ ಒಂದು ಅಗ್ರಿಮೆಂಟನ್ನು ಬರೆಯುತ್ತಾರೆ, ಆದರೆ ಅದರಲ್ಲಿ ವಿಷಯಗಳು 1977 ನೇ ಸಾಲಿಗೆ ಸಂಬಂಧಪಟ್ಟಿದ್ದು ಇರುತ್ತವೆ ಎಂಬುದಾಗಿ ನುಡಿದಿದ್ದಾರೆ. ಆದರೆ ಆ ಅಗ್ರಿಮೆಂಟ್ ಯಾವ ತಿಂಗಳು ಆಗಿದೆ ಎಂಬುದು ನನಗೆ ಗೊತ್ತಿಲ್ಲ. ನನ್ನ ತಾಯಿಯು ಬರೆದಿಟ್ಟ ವಿಲ್ ನಾಮೆಯ ದಿನಾಂಕ ನನಗೆ ಗೊತ್ತಿಲ್ಲ. ಸದ್ರಿ ವಿಲ್ ನಾಮೆಯು ಒಂದು ಪುಟದ್ದಾಗಿದೆ. ಸದ್ರಿ ವಿಲ್ ನಾಮೆಯು ಕನ್ನಡ ಭಾಷೆಯಲ್ಲಿರುತ್ತದೆ. ಸದ್ರಿ ವಿಲ್ ನಾಮೆಯಲ್ಲಿ ನನ್ನ ತಾಯಿಯು ಮಾತ್ರ ಸಹಿಯನ್ನು ಹಾಕಿದ್ದಾರೆ. ಸದ್ರಿ ವಿಲ್ ನಾಮೆಯನ್ನು ಯಾರು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನಗೆ ಮುಗ್ದಲಿನ್ ಎಂಬ ಅಕ್ಕ ಇದ್ದಾರೆ. ಅವರನ್ನು ಕಾರವಾರಕ್ಕೆ ಮದುವೆ ಮಾಡಿಕೊಟ್ಟಿದ್ದೇವೆ. ವಿಲ್ ನಾಮೆಯಲ್ಲಿ ಅವರಿಗೆ ಹಕ್ಕು ಬರೆದಿಟ್ಟ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಅವರ ಮದುವೆಯ ಕಾಲಕ್ಕೆ ಕೊಡಬೇಕಾದದ್ದನ್ನು ಕೊಟ್ಟಿದ್ದೇವೆ.

ದಾವಾ ಸ್ಥಳದಲ್ಲಿರುವ ಮನೆಯ ಬಗ್ಗೆ ನನ್ನ ಹೆಸರು ಎಂಟ್ರಿ ಮಾಡಲು ನಾನು ಪಂಚಾಯತಿಗೆ ಅರ್ಜಿಯನ್ನು ನೀಡಿದ್ದೇನೆ, ಸದ್ರಿ ಅರ್ಜಿಯನ್ನು ನನ್ನ ತಾಯಿ ಮೃತಳಾದ ನಂತರ ನೀಡಿದ್ದೇನೆ. ನನ್ನ ತಾಯಿಯು 1980 ರಲ್ಲಿ ಮೃತರಾಗಿರಬಹುದು. ದಾವಾ ಸ್ಥಳದಲ್ಲಿ ಇರುವ ವಿದ್ಯುಚ್ಛಕ್ತಿಯ ಮೀಟರ್ ನನ್ನ ಹೆಸರಿಗೆ ಬದಲಾಯಿಸಲು ನಾನು ವಿದ್ಯುತ್ ಇಲಾಖೆಗೆ ಅರ್ಜಿಯನ್ನು ನೀಡಿದ್ದೇನೆ. ಸಾಕ್ಷಿಯು ಮುಂದುವರಿದು ಸದ್ರಿ ವಿದ್ಯುಚ್ಛಕ್ತಿ ಮೀಟರನ್ನು ಫೇಕ್ ಮಾಡಿ ಪಡೆದಿದ್ದರು ಎಂಬುದಾಗಿ ನುಡಿದಿದ್ದಾರೆ. ಸದ್ರಿ ವಿದ್ಯುಚ್ಛಕ್ತಿ ಮೀಟರನ್ನು ಕ್ಯಾನ್ಸಲ್ ಮಾಡಲು ನಾನು ಅರ್ಜಿ ಕೊಟ್ಟಿದ್ದೆನು, ಅದರಂತೆ ಅದು

ಕ್ಯಾನ್ಸಲ್ ಆಗಿದೆ ಎಂಬುದಾಗಿ ನುಡಿದಿದ್ದಾರೆ, ಆದರೆ ಅದಕ್ಕೆ ಸಂಬಂಧಪಟ್ಟ ದಾಖಲೆ ನನ್ನ ಹತ್ತಿರ ಇಲ್ಲ ಹಾಗೂ ಈಗ ದಾವಾ ಸ್ಥಳದಲ್ಲಿ ವಿದ್ಯುತ್ ಮೀಟರ್ ಇಲ್ಲ ಎಂಬುದಾಗಿ ನುಡಿದಿದ್ದಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.